ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 910

ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 13-03-2020

ಕ್ರಸ	ಪ್ರಶ್ನೆ	ಉತ್ತರ
ಅ	ತುಮಕೂರು ನಗರದಲ್ಲಿರುವ ಜಿಲ್ಲಾ ಬಸ್ ನಿಲ್ದಾಣವನ್ನು ತೆರವುಗೊಳಿಸಿ, ಹೊಸ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲಾಗುತ್ತಿದೆಯೇ;	ಹೌದು, ತುಮಕೂರು ನಗರದಲ್ಲಿರುವ ಜಿಲ್ಲಾ ಬಸ್ ನಿಲ್ದಾಣವನ್ನು ತೆರವುಗೊಳಿಸಿ, ಹೊಸ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡುವ ಕಾಮಗಾರಿಯು ಪ್ರಗತಿಯಲ್ಲಿದೆ.
ಆ	ಹಾಗಿದ್ದಲ್ಲಿ, ಈ ಬಸ್ ನಿಲ್ದಾಣ ಒಟ್ಟು ಎಷ್ಟು ವಿಸ್ತೀರ್ಣದ ಜಾಗವನ್ನು ಹೊಂದಿದೆ ಹಾಗೂ ಈ ಹೊಸ ಬಸ್ ನಿಲ್ದಾಣದಲ್ಲಿ ಬರುವ ಸೌಲಭ್ಯಗಳೇನು; ಮಾಹಿತಿ ನೀಡುವುದು;	ಹೊಸ ಬಸ್ ನಿಲ್ದಾಣವನ್ನು ನಿರ್ಮಿಸುತ್ತಿರುವ ನಿವೇಶನದ ವಿಸ್ತೀರ್ಣವು 04 ಎಕರೆ 17 ಗುಂಟೆ ಇರುತ್ತದೆ. ಸದರಿ ಬಸ್ ನಿಲ್ದಾಣದಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲು ಯೋಜಿಸಲಾಗಿದೆ. • ನೆಲಮಾಳಿಗೆ ಅಂತಸ್ತು: ದ್ವಿಚಕ್ರ ವಾಹನ ಮತ್ತು ಕಾರುಗಳ ನಿಲುಗಡೆ. • ಕೆಳ ನೆಲಅಂತಸ್ತು: ನಗರ ಸಾರಿಗೆ ಬಸ್ ನಿಲ್ದಾಣ, ಶೌಚಾಲಯ ವ್ಯವಸ್ಥೆ, ಆಡಳಿತ ಕಛೇರಿ. • ಮೇಲಿನ ನೆಲಅಂತಸ್ತು: ಗ್ರಾಮಾಂತರ ಸಾರಿಗೆ ಬಸ್ ನಿಲ್ದಾಣ, ಪ್ರಯಾಣಿಕರ ಕಾಯುವ ಹಜಾರ, ಶೌಚಾಲಯ ವ್ಯವಸ್ಥೆಗಳು, ನಿರೀಕ್ಷಣಾ ಕೊಠಡಿಗಳು, • ಮೊದಲನೇ ಮಹಡಿ: ವಾಣಿಜ್ಯ ಮಳಿಗೆಗಳು, ಹಜಾರ ಹಾಗೂ ಶೌಚಾಲಯ ವ್ಯವಸ್ಥೆ. • ಎರಡನೇ ಮಹಡಿ: ವಾಣಿಜ್ಯ ಮಳಿಗೆಗಳು, ಹಜಾರ ಹಾಗೂ ಶೌಚಾಲಯ ವ್ಯವಸ್ಥೆ. • ಮೂರನೇ ಮಹಡಿ: ವಾಣಿಜ್ಯ ಮಳಿಗೆಗಳು, ಹಜಾರ ಹಾಗೂ ಶೌಚಾಲಯ ವ್ಯವಸ್ಥೆ.
ಇ	ಈ ಹೊಸ ಬಸ್ ನಿಲ್ದಾಣ ನಿರ್ಮಿಸಲು ಯೋಜನಾ ವೆಚ್ಚವೆಷ್ಟು; (ಮಾಹಿತಿ ಒದಗಿಸುವುದು)	ಬಸ್ ನಿಲ್ದಾಣದ ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ.82,18,40,000.00
ಈ	ಈ ಬಸ್ ನಿಲ್ದಾಣ ನಿರ್ಮಾಣ ಮಾಡಲು ಸ್ಮಾರ್ಟ್ ಸಿಟಿ ಯೋಜನೆಯ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆಯೇ; ಹಾಗಿದ್ದಲ್ಲಿ, ಸಂಪೂರ್ಣ ಯೋಜನಾ ವೆಚ್ಚವನ್ನು ಯಾವ ಯಾವ ಸಂಸ್ಥೆಗಳು ನೀಡುತ್ತಿವೆ? (ವಿವರ ನೀಡುವುದು)	ಈ ಬಸ್ ನಿಲ್ದಾಣದ ನಿರ್ಮಾಣವನ್ನು ತುಮಕೂರು ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಳ್ಳಲಾಗಿದೆ. ಸದರಿ ಯೋಜನೆಗೆ ಅನುದಾನವನ್ನು ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ರವರು ನೀಡುತ್ತಿದ್ದಾರೆ.

ಸಂಖ್ಯೆ: ಟಿಡಿ 83 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು